ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ  ದಿನಾಂಕ : DATE : 3/5/20

# ಔಷಧ ಸಾಮಗ್ರಿ ಖರೀದಿ ಅವ್ಯವಹಾರ ಪರಿಶೀಲನೆಗೆ ಕಾಗೇರಿ ಅಡ್ಡಿ

## ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ್ ಆರೋಪ

# ಸ್ಪೀಕರ್ ಕಾಗೇರಿ ವಿರುದ್ಧ ಹಕ್ಕುಚ್ಯುತಿ

▫ ವಿಕ ಸುದ್ದಿಲೋಕ ಬೆಂಗಳೂರು

ಕೊರೊನಾ ಸಂಕಷ್ಟ ನಿಭಾಯಿಸಲು ಔಷಧ, ವೈದ್ಯಕೀಯ ಸಾಮಗ್ರಿಗಳ ಖರೀದಿಯಲ್ಲೂ ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ, ಅಕ್ರಮ ನಡೆದಿದೆ ಎನ್ನುವ ಸಂಗತಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಮಧ್ಯೆ ಸಂಘರ್ಷವನ್ನುಂಟು ಮಾಡಿದೆ.

ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಆರೋಪಕ್ಕಾಗಿ ಸಮಿತಿ ಅಧ್ಯಕ್ಷ ಎಚ್.ಕೆ.ಪಾಟೀಲ್ ಅವರು ಸ್ಪೀಕರ್ ವಿರುದ್ಧವೇ ಹಕ್ಕುಚ್ಯುತಿ ಮಂಡನೆ ನಿರ್ಧಾರ ಪ್ರಕಟಿಸಿದ್ದಾರೆ. ಪಿಪಿಇ ಕಿಟ್, ಸ್ಯಾನಿಟೈಸರ್ ಖರೀದಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂಬ ದೂರು ಆಧರಿಸಿ ಪರಿಶೀಲನೆ ನಡೆಸುವ ಲೆಕ್ಕಪತ್ರ ಸಮಿತಿ ನಿರ್ಧಾರಕ್ಕೆ ಸ್ಪೀಕರ್ ತಡೆಯಾಜ್ಞೆ ನೀಡಿರುವುದು ವಿವಾದದ ಕೇಂದ್ರಬಿಂದುವಾಗಿದೆ.

ಶನಿವಾರ ಪತ್ರಿಕಾಗೋಷ್ಠಿ ನಡೆಸಿದ ಎಚ್.ಕೆ. ಪಾಟೀಲ್, ''ದೂರು ಆಧರಿಸಿ ಕೆಲಸ ಮಾಡಲು ಸ್ಪೀಕರ್ ತಡೆಯೊಡ್ಡಿದ್ದಾರೆ. ಶಾಸನ ಸಭೆ ಸಮಿತಿ ಕರ್ತವ್ಯಕ್ಕೆ ಧಕ್ಕೆ ಮಾಡಿದ್ದಾರೆ. ಸ್ಪೀಕರ್ ಹೊರಡಿಸಿರುವ ಆದೇಶ ನಮ್ಮ ಕರ್ತವ್ಯಕ್ಕೆ ಚ್ಯುತಿ ಮಾಡುವ ಪ್ರಯತ್ನವಾಗಿದೆ,'' ಎಂದು ಆಪಾದಿಸಿದರು.

''ಸ್ಪೀಕರ್ ಅವರ ನೋಟೀಸ್‌ನಿಂದಾಗಿ ಸಮಿತಿಯ ಕರ್ತವ್ಯ ನಿರ್ವಹಣೆ ಹಕ್ಕಿಗೆ ಚ್ಯುತಿಯಾಗಿದೆ. ಅದಕ್ಕಾಗಿ ಸ್ಪೀಕರ್ ವಿರುದ್ಧ ಹಕ್ಕುಚ್ಯುತಿ ಮಂಡಿಸುವ ಸಂಬಂಧ ಮಂಗಳವಾರ ಸಮಿತಿ ಸಭೆಯಲ್ಲಿ ಚರ್ಚಿಸಿ ಸ್ಪಷ್ಟ ನಿರ್ಧಾರ ಪ್ರಕಟಿಸುತ್ತೇವೆ,'' ಎಂದು ಪಾಟೀಲ್ ತಿಳಿಸಿದರು.

**ಇದೇನು ಕಾಂಗ್ರೆಸ್ ಸಮಿತಿಯೇ?:** ''ಸದನದ ಎಲ್ಲ ಪಕ್ಷಗಳ ಸದಸ್ಯರಿದ್ದು ಇದೇನೂ ಕಾಂಗ್ರೆಸ್ ಸಮಿತಿ ಅಲ್ಲ'' ಎಂದು ಸ್ಪಷ್ಟಪಡಿಸಿದರು. ಸಚಿವರಾದ ಶ್ರೀರಾಮುಲು, ರಮೇಶ್ ಜಾರಕಿಹೊಳಿ ಮತ್ತಿತರರು ಅಕ್ರಮ ನಡೆದಿಲ್ಲ ಎಂಬ ಸಮರ್ಥನೆಗೆ ಪ್ರತಿಕ್ರಿಯಿಸಿ, ''ಆರೋಪದ ಬಗ್ಗೆ ಸಮಿತಿ ಮುಂದೆ ವಿವರ ಒದಗಿಸಲಿ. ಸಮಿತಿ ಪರಾಮರ್ಶಿಸುತ್ತದೆ,'' ಎಂದರು.

**ನಾವೇನು ಬಸ್ ಸ್ಟ್ಯಾಂಡ್‌ಗೆ ಹೋಗಿದ್ದೆವಾ?:** ಲಾಕ್ ಡೌನ್ ಹಿನ್ನೆಲೆಯಲ್ಲಿ ಸಮಿತಿಯ ಸ್ಥಳ ಪರಿಶೀಲನೆಗೆ ತಡೆ ನೀಡಿದ್ದೇನೆ ಎಂದು ಸ್ಪೀಕರ್ ಸಮಜಾಯಿಷಿ ನೀಡುತ್ತಿದ್ದಾರೆ. ಸಮಿತಿ ಬಸ್ ಬಸ್‌ಸ್ಟ್ಯಾಂಡ್‌ಗೆ ಹೊರಟಿತ್ತಾ? ಮದ್ಯದಂಗಡಿ, ಬಸ್ ಎಲ್ಲವೂ ಲಾಕ್‌ಡೌನ್ ಮಧ್ಯೆಯೇ ಆರಂಭವಾಗಿಲ್ಲವೇ? ಎಲ್ಲದಕ್ಕೂ ಇಲ್ಲದ ಅಡ್ಡಿ ಸಮಿತಿ ಕಾರ್ಯ ನಿರ್ವಹಣೆಗೆ ಏಕೆ? ಸ್ಪೀಕರ್ ನಡೆ ಸಂವಿಧಾನಕ್ಕೆ ವಿರುದ್ಧವಾದುದು ಎಂದು ಪಾಟೀಲ್ ಟೀಕಿಸಿದರು.

**ಕಡಿಮೆ ಮೊತ್ತದ ಟೆಂಡರ್ ರದ್ದಾಗಿದ್ದು ಏಕೆ?**



**ವೆಂಟಿಲೇಟರ್ ಖರೀದಿಗೆ ಎಷ್ಟು ಹಣ ಪಾವತಿ ಮಾಡಲಾಗಿದೆ. 500 ಎಂ.ಎಲ್ ಸ್ಯಾನಿಟೈಸರ್‌ಗೆ 90 ರೂ. ಗೆ ಟೆಂಡರ್‌ಕರೆದು ರದ್ದುಪಡಿಸಿ, ಅದೇ ಉತ್ಪನ್ನವನ್ನು 250 ರೂ. ಗೆ ಖರೀದಿ ಮಾಡಲಾಗಿದೆ. ಇಲ್ಲಿ ಆಗಿರೋದು ಏನು? ಅವ್ಯವಹಾರ ಅಲ್ಲವೇ? ಈ ಬಗ್ಗೆ ಸಮಿತಿ ಲೆಕ್ಕ ಕೇಳಬೇಕಲ್ಲವೇ?**

**-ಎಚ್.ಕೆ. ಪಾಟೀಲ್**

